ದಿನಾಂಕ:25/09/2019 ರಂದು ಬುಧವಾರ ಬೆಳಿಗ್ಗೆ 11:00 ಗಂಟೆಗೆ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಉಪ ವಿಭಾಗ ಕಛೇರಿ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

ಹಾಜರಿದ್ದ ಅಧಿಕಾರಿಗಳು / ನೌಕರರು.

ಶ್ರೀ/ಶ್ರೀಮತಿ/ಕುಮಾರಿ:

1) ನಾರಾಯಣ ಕಳ್ಳಿಮನಿ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ವಿಭಾಗ
2) ಜಗದೀಶ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೆಳ್ಳೂರು ಉಪವಿಭಾಗ
3) ಜಿ. ರಾಮಚಂದ್ರ : ಲೆಕ್ಕಾಧಿಕಾರಿ, ನಾಗಮಂಗಲ ವಿಭಾಗ
4) ರವಿಕುಮಾರ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ತಾಂ), ನಾಗಮಂಗಲ ವಿಭಾಗ
5) ವಿಜಿ ಕುಮಾರ್ : ಶಾಖಾಧಿಕಾರಿ, ಬೆಳ್ಳೂರು ಶಾಖೆ
6) ನವಿನ್ ಕುಮಾರ್ : ಕಿರಿಯ ಇಂಜಿನಿಯರ್(ವಿ), ಕದಬಹಳ್ಳಿ ಶಾಖೆ
7) ನಂದಕುಮಾರ್ : ಕಿರಿಯ ಇಂಜಿನಿಯರ್(ವಿ), ಬಿಂಡಿಗನವಿಲೆ ಶಾಖೆ
8) ರಾಮಚಂದ್ರ : ಪ್ರಭಾರ ಹಿರಿಯ ಸಹಾಯಕರು, ಬೆಳ್ಳೂರು ಉಪವಿಭಾಗ.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪವಿಭಾಗ ಬೆಳ್ಳೂರು ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ಆಲಿಸಿ ಬಗೆಹರಿಸುವ ನಿಟ್ಟಿನಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಜನ ಸಂಪರ್ಕ ಸಭೆಯನ್ನು ನಡೆಸುವಂತೆ ಕೆ.ಇ.ಆರ್.ಸಿ ರವರಿಂದ ಆದೇಶವಾಗಿರುತ್ತದೆ. ವಿದ್ಯುತ್ ದರವನ್ನು ಪರಿಷ್ಕರಿಸುವ ಸಂದರ್ಭದಲ್ಲಿ ವಿದ್ಯುತ್ ಬಳಕೆದಾರರ ಒಪ್ಪಿಗೆಯ ಅವಶ್ಯಕತೆ ಇರುತ್ತದೆ. ಶಾಖಾಧಿಕಾರಿಗಳು ವಿದ್ಯುತ್ ಬಳಕೆದಾರರ ಸಮಸ್ಯೆಗಳಿಗೆ ಸ್ಪಂದಿಸುವ ಕುರಿತು ಹಾಗೂ ಗ್ರಾಹಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್ ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ ರವರು ವಿದ್ಯುತ್ ಸಂಬಂಧಿತ ದೂರುಗಳನ್ನು ಮೌಖಿಕವಾಗಿ / ಲಿಖಿತವಾಗಿ ಸಲ್ಲಿಸುವಂತೆ ವಿದ್ಯುತ್ ಗ್ರಾಹಕರಲ್ಲಿ / ಸಾರ್ವಜನಿಕರಲ್ಲಿ ಕೇಳಲಾಯಿತು.

ಈ ಹಿಂದಿನ ಸಭೆಯಲ್ಲಿ ನೀಡಲಾದ ದೂರುಗಳನ್ನು ಹಾಗೂ ಅದರ ಬಗ್ಗೆ ತೆಗೆದುಕೊಂಡ ಕ್ರಮಗಳನ್ನು ಮೊದಲು ಪರಿಶೀಲಿಸಲಾಯಿತು. ಬಾಕಿ ಇರುವ ಸಮಸ್ಯೆಗಳನ್ನು ಶೀಘ್ರವಾಗಿ ಪರಿಹರಿಸುವಂತೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ರವರು ಸೂಚಿಸಿದರು.

Scanned by CamScanner

Scanned by CamScanner

1)ಶ್ರೀ. ಪ್ರಸನ್ನ ಕಮಡಿಹಳ್ಳಿ ಮೊಬೈಲ್ ನಂ:-9591831625

ದೂರು:- ಬೆಳ್ಳೂರು ಶಾಖೆಯ ಬೆಳ್ಳೂರು ಕ್ರಾಸ್ ಬಳಿ ಹೊಸದಾಗಿ ನಿರ್ಮಿಸಿರುವ ಬಹುಮಹಡಿ ಕಟ್ಟಡಕ್ಕೆ ಹಾಲಿ ಇರುವ 63 ಕೆ.ವಿ.ಎ ಪರಿವರ್ತಕದ ಸಾಮರ್ಥ್ಯವನ್ನು ಹೆಚ್ಚಿಸಿ 100 ಕೆ.ವಿ.ಎ ಮಾಡಿಕೊಡಲು ಮನವಿ ಮಾಡಿರುತ್ತಾರೆ.

ಕ್ರಮ:- ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿಭಾಗ ರವರನ್ನು ಸ್ಥಳ ಪರಿಶಿಲನೆ ಮಾಡಿ ಹಾಲಿಇರುವ ಸ್ಥಾವರಕ್ಕೆ ಸ್ವಯಂ ಕಾರ್ಯನಿರ್ವಾಹಣೆಯಡಿ ಪರಿವರ್ತಕವನ್ನು ಅಳವಡಿಸಿಕೊಳ್ಳಲು ಸೂಚಿಸಿರುತ್ತಾರೆ.

2)ಶ್ರೀ ಸಂತೋಷ ಕಂಚನಹಳ್ಳಿ ಮೊಬೈಲ್ ನಂ:-9483374449

2.ದೂರು:- ಕಂಚನಹಳ್ಳಿ ಗ್ರಾಮದ ಪರಿವರ್ತಕ ಅಧಿಕ ಬಾರದಿಂದ ಕೂಡಿದ್ದು ಗ್ರಾಮಕ್ಕೆ ಹೆಚ್ಚುವರಿಯಾಗಿ 25 ಕೆ.ವಿ.ಎ ಪರಿವರ್ತಕವನ್ನು ಅಳವಡಿಸಿಕೊಡಲು ಮನವಿ ಮಾಡಿರುತ್ತಾರೆ.

ಕ್ರಮ:- ನಿಗಮದ ನಿಯಮದ ಅನುಸಾರ ಕಂಚನಹಳ್ಳಿ ಗ್ರಾಮ ಸ್ಥಳ ಪರಿಶೀಲಿಸಿ ಪರಿಶಿಷ್ಟ ಜಾತಿ ಕಾಲೋನಿಗೆ ಎಸ್.ಸಿ.ಪಿ ಯೋಜನೆಯಡಿ ಹೊಸದಾಗಿ 25 ಕೆ.ವಿ.ಎ ಪರಿವರ್ತಕ ಅಳವಡಿಸಲು ಅಂದಾಜುಪಟ್ಟಿಯನ್ನು ತಯಾರಿಸಿ ಸಲ್ಲಿಸಲು ಸೂಚಿಸಿರುತ್ತಾರೆ.

3.ದೂರು:- ಕಂಚನಹಳ್ಳಿ ಗ್ರಾಮದ ಕುಡಿಯುವ ನೀರು ಸ್ಥಾವರಕ್ಕೆ ಹೊಸದಾಗಿ 25 ಕೆ.ವಿ.ಎ ಪರಿವರ್ತಕವನ್ನು ಅಳವಡಿಸಿಕೊಡಲು ಮನವಿ ಮಾಡಿರುತ್ತಾರೆ.

ಕ್ರಮ:- ನಿಗಮದ ನಿಯಮದ ಅನುಸಾರ ಕಂಚನಹಳ್ಳಿ ಗ್ರಾಮ ಕುಡಿಯುವ ನೀರು ಸ್ಥಾವರಕ್ಕೆ ಒಂದು ವಾರದೊಳಗೆ ಹೊಸದಾಗಿ 25 ಕೆ.ವಿ.ಎ ಪರಿವರ್ತಕ ಅಳವಡಿಸಲು ಗುತ್ತಿಗೆದಾರರಿಗೆ ಸೂಚಿಸಿರುತ್ತಾರೆ.

3)ಕುಮಾರ ಕೆಂಚಗೋನಹಳ್ಳಿ ಮೊಬೈಲ್ 9481559551

4.ದೂರು:-ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ ಹಣ ಪಾವತಿ ಮಾಡಿ ಸಕ್ರಮೀಕರಣಗೊಂಡಿರುವ ಸ್ಥಾವರಗಳಿಗೆ ಇದುವರೆಗೆ ಮೂಲಭೂತ ಸೌಕರ್ಯ ಕಲ್ಪಿಸಿರುವುದಿಲ್ಲ. ಗುತ್ತಿಗೆ ನೀಡಲಾದ ಏಜೆನ್ಸಿಯವರು ಕಾಮಗಾರಿಗಳನ್ನು ನಿರ್ವಹಿಸುತ್ತಿರುವುದಿಲ್ಲ. ಆದ್ದರಿಂದ ಶೀಘ್ರವಾಗಿ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಬೇಕಾಗಿ ಕೋರಿದರು.

ಕ್ರಮ:- ಗುತ್ತಿಗೆ ನೀಡಲಾದ ಏಜೆನ್ಸಿಯವರಿಗೆ ವಿಭಾಗದಿಂದ ಅವಾರ್ಡ್ ನೀಡಲಾಗಿದು ಶ್ರೀ ನಂಜುಂಡೇಶ್ವರ ಎಲೆಕ್ಟ್ರಿಕಲ್ಸ್‌ರವರ ಗುತ್ತಿಗೆ ಅವಧಿ ಪೂರ್ಣಗೊಂಡಿದ್ದು, ಹೊಸದಾಗಿ ಟೇಂಡರ್ ನೀಡಿರುವ ಗುತ್ತಿಗೆದಾರರಿಗೆ ಬಾಕಿ ಉಳಿದಿರುವ ಕಾಮಗಾರಿಗಳ ಕಾರ್ಯ ಪ್ರಧಾನ ನೀಡಿ ಶೀಘ್ರವಾಗಿ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಆದೇಶಿಸಿದರು.

4)ಶ್ರೀ ದಿನೇಶ ಮೊಬೈಲ್ 9964539706

5.ದೂರು:-ಚಾಕೆನಹಳ್ಳಿ ಗ್ರಾಮದ 63 ಕೆ.ವಿ.ಎ ಪರಿವರ್ತಕ ಅಧಿಕ ಬಾರದಿಂದ ಎರಡು ಬಾರಿ ವಿಫಲಗೊಂಡಿದ್ದು ಹೆಚ್ಚುವರಿಯಾಗಿ 25 ಕೆ.ವಿ.ಎ ಪರಿವರ್ತಕ ಅಳವಡಿಸುವಂತೆ ಕೋರಿರುತ್ತಾರೆ.

Scanned by CamScanner

Scanned by CamScanner

ಸು:- ನಿಗಮದ ನಿಯಮದ ಅನುಸಾರ ಸ್ಥಳ ಪರಿಶೀಲಿಸಿ ಅಕ್ರಮ ಪಂಪ್ ಸೆಟ್‌ಗಳನ್ನು ಸಕ್ರಮಗೊಳಿಸಿ ಅಭಿವೃದ್ಧಿ ದಿನ ಯೋಜನೆಯಡಿ ಹೊಸದಾಗಿ 25 ಕೆ.ವಿ.ಎ ಪರಿವರ್ತಕ ಅಳವಡಿಸಲು ಅಂದಾಜುಪಟ್ಟಿಯನ್ನು ತಯಾರಿಸಿ ಸಲ್ಲಿಸಲು ಸೂಚಿಸಿರುತ್ತಾರೆ.

ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನಸಂಪರ್ಕ ಸಭೆಯಲ್ಲಿ ಹಾಜರುಪಡಿಸುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

ಹಿರಿಯ ಸಹಾಯಕರು ಬೆಳ್ಳೂರು ಉಪವಿಭಾಗರವರು ಸಭೆಯಲ್ಲಿ ಭಗವಹಿಸಿದ್ದ ಎಲ್ಲಾ ಅಧಿಕಾರಿಗಳು/ನೌಕರರು ಹಾಗೂ ಗ್ರಾಹಕರುಗಳಿಗೆ ವಂದನಾರ್ಪಣೆ ಸಲ್ಲಿಸಿದ ನಂತರ ಸಭೆಯನ್ನು ಮಧ್ಯಾಹ್ನ 02:00 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ದೂರನ್ನು ನೀಡಿದ ಗ್ರಾಹಕರ ಸಂಖ್ಯೆ-04

ಒಟ್ಟು ದೂರು/ಸಮಸ್ಯೆಗಳು- 05

ಮೆಮೊ ಸಂಖ್ಯೆ:ಸಕಾನಿಇಂ(ವಿ)/ಸಇಂ(ತಾ)/ಬೆ/19-20/ 734A

ದಿನಾಂಕ: 25/9/19

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ಉಪ ವಿಭಾಗ,
ಬೆಳ್ಳೂರು.

ಪ್ರತಿಯನ್ನು ಇವರ ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ ಮಂಡ್ಯ.
4. ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ವಿಭಾಗ ನಾಗಮಂಗಲ.

ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.

1. ಲೆಕ್ಕಾಧಿಕಾರಿ, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ವಿಭಾಗ ನಾಗಮಂಗಲ.
2. ಲೆಕ್ಕಾಧಿಕಾರಿ, (ಆಂಪ) ಚಾ.ವಿ.ಸ.ನಿ.ನಿ., ಪಾಂಡವಪುರ.
3. ಶಾಖಾಧಿಕಾರಿ, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಶಾಖೆ ಬೆಳ್ಳೂರು/ಬಿಂಡಿಗನವಿಲೆ/ಕದಬಹಳ್ಳಿ.
4. ಕಿಆಸ/ಮು.ಕ

Scanned by CamScanner

Scanned by CamScanner